ದಿನಾಂಕಃ 12-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

-ಃ ಮುಖ್ಯ ವಿಚಾರಣೆಃ ಶ್ರೀ ಬಿ ಎಂ ಬಿ ವಕೀಲರಿಂದ ಅರ್ಜಿದಾರರ ಪರವಾಗಿಃ-

ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುತ್ತದೆ ಮತ್ತು ಸತ್ಯವಾಗಿರುತ್ತದೆ. ಅದನ್ನು ಓದಿ ತಿಳಿದುಕೊಂಡು ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ.

2. ದಿನಾಂಕಃ 02.01.2022 ರಂದು ಬಸವಲಿಂಗೇಗೌಡ ಯಾನೆ ಹೆಚ್.ಟಿ ಬಸವಲಿಂಗಪ್ಪ ಬಿನ್ ಲೇಟ್ ತಿಮ್ಮಪ್ಪ ರವರು ಅವರ ಮಗನಾದ ಹೆಚ್.ಬಿ ತಿಪ್ಪೆಸ್ವಾಮಿರವರ ಹೆಸರಿಗೆ ಬರೆದುಕೊಟ್ಟ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ.4(ಎ) ಎಂದು ಗುರುತಿಸಲಾಯಿತು. ಸದರಿ ವಿಲ್ಲಿಗೆ ಸಾಕ್ಷಿಯಾದ ಹೆಚ್.ಎಂ ಚಂದ್ರಪ್ಪರವರು ಸಹಿ ಮಾಡಿದ್ದಾರೆ. ಸದರಿ ವಿಲ್ಲಿಗೆ ಮೇಲೆ ಹೇಳಿದ ಬಸವಲಿಂಗೇಗೌಡ ಯಾನೆ ಹೆಚ್.ಟಿ ಬಸವಲಿಂಗಪ್ಪ ರವರು ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ವಿಲ್ಲಿಗೆ ವಕೀಲರಾದ ಸುಧೀರ್ ಕುಮಾರ್ ರವರು ಸಹಿ ಮಾಡಿದ್ದಾರೆ.

ನನ್ನ ಪ್ರಮಾಣದಲ್ಲಿ ತಿಳಿಸಿರುವ ಕಾರಣಗಳಿಗೆ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಸು.